# ಚಿತ್ರದುರ್ಗ ಜಿಲ್ಲೆಯ ತತ್ವಪದಗಳಲ್ಲಿನ ಸಾಮಾಜಿಕ ಮೌಲ್ಯಗಳು

**ತಿಪ್ಪೇಸ್ವಾಮಿ ಎಂ**

ಸಂಶೋಧನಾ ವಿದ್ಯಾರ್ಥಿ

ಡಾ.ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

thippeswamymt87@gmail.com

ಚಿತ್ರದುರ್ಗವೆಂದರೆ ಕೇವಲ ಬಿಸಿಲ ನಾಡಲ್ಲ, ಬುಡಕಟ್ಟು ಸಂಸ್ಕೃತಿಯ ತವರೂರು. ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯುಳ್ಳ ಚಿತ್ರದುರ್ಗವು ಮೂಲತಃ ಬಯಲು ಸೀಮೆಯ ನಾಡಾಗಿದೆ. ಬರಗಾಲ ಮತ್ತು ಕಡು ಬಡತನವನ್ನು ತನ್ನ ಒಡಲಲ್ಲಿ ಕಟ್ಟಿಕೊಂಡಿರುವ ಪ್ರದೇಶವಾಗಿದೆ. ಬರದ ಬವಣೆಯಲ್ಲಿ ಬಳಲುವ ಇಲ್ಲಿನ ಜನರು ಜೀವನೋಪಯಕ್ಕಾಗಿ 'ಕೂಲಿ' ಕೆಲಸವನ್ನು ನಂಬಿಕೊಂಡು ಜೀವಿಸುವುದರ ಜೊತೆಗೆ ಪಶುಪಾಲನ ಸಂಸ್ಕೃತಿಯನ್ನು ವಂಶಪರಂಪರಗತವಾಗಿ ರೂಢಿಸಿಕೊಂಡು ಬಂದಿದ್ದಾರೆ. ಬೇಟೆ, ಪಶುಪಲಾನೆ, ಕೃಷಿಯನ್ನು ಬದುಕಿನ ಮೂಲವನ್ನಾಗಿ ಮಾಡಿಕೊಂಡಿರುವ ಇಲ್ಲಿನ ಜನಕ್ಕೆ ನಿಸರ್ಗವೆ ದೇವರು. ತಮ್ಮ ಸಮುದಾಯದ ರಕ್ಷಣೆಗಾಗಿ ಹೋರಾಡಿದ ಪೂರ್ವಿಕರನ್ನು ಸಾಂಸ್ಕೃತಿಕ ವೀರರನ್ನಗಿ, ನಾಯಕರನ್ನಾಗಿ ನೋಡುವುದರ ಜೊತೆಗೆ ಆರಾಧಿಸಿಕೊಂಡು ಬರುತ್ತಾರೆ. ಇಲ್ಲಿ ದುಡಿಯುವ ವರ್ಗವೇ ಹೆಚ್ಚಿರುವುದರಿಂದ, ದಿನದ ದುಡಿಮೆಯ ಆಯಾಸವನ್ನು ನೀಗಿಸಿಕೊಳ್ಳಲು, ಗುಡಿಕಟ್ಟೆಗಳಲ್ಲಿ, ಗದ್ದುಗೆಗಳಲ್ಲಿ ಭಜನೆ ಮಾಡುವುದರ ಮೂಲಕ, ಅಧ್ಯಾತ್ಮದ ಅರಿವನ್ನು, ಜೀವನದ ಮೌಲ್ಯಗಳನ್ನು, ಪದಗಳ ಮೂಲಕ, ಹಿರಿಯ ಅನುಭಾವಿಗಳ ಮೂಲಕ ಪಡೆದುಕೊಳ್ಳುತ್ತಿದ್ದರು. ಬಡತನ ಬರಗಾಲದ ಕಷ್ಟಕಾರ್ಪಣ್ಯಗಳಲ್ಲಿ ಬಳಲುತ್ತಿದ್ದ ಜನಸಮಾನ್ಯರಿಗೆ ಒಂದು ಸಾಂತ್ವನ ನೀಡುವುದರ ಜೊತೆಗೆ ಬದುಕನ್ನು ಎದುರಿಸುವಂತ ಮನೋಸ್ಥೈರ್ಯವನ್ನು ನೀಡಿದವರು ಈ ಭಾಗದ ಸಿದ್ಧರು, ಅವಧೂತರು, ಆರೂಢರು, ಸೂಫಿಗಳು ಮತ್ತು ತತ್ವಪದಕಾರರು. ಮಧ್ಯ ಕರ್ನಾಟಕದ ಸಾಂಸ್ಕೃತಿಕ ನಾಯಕನಾಗಿ ಈ ಭಾಗದಲ್ಲಿ ಮಾತ್ರವಲ್ಲದೆ ನಾಡಿನಾದ್ಯಂತ ಹಾಗೂ ಬೇರೆ ರಾಜ್ಯಗಳಲ್ಲಿಯೂ ತಮ್ಮ ಭಕ್ತ ಸಮೂಹವನ್ನು ಹೊಂದಿದ್ದ, ಹುಬ್ಬಳಿಯ ಸಿದ್ಧರೂಢರಂತೆ ಜಾತಿ, ಧರ್ಮ, ವರ್ಗ, ಲಿಂಗ ತಾರತಮ್ಯ ಹೊಂದಿರದೆ ಅನೇಕ ಶಿಷ್ಯ ಬಳಗವನ್ನು ಹೊಂದಿದ್ದ ಸಾಂಸ್ಕೃತಿಕ ನಾಯಕನೆಂದರೆ 'ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ'. ಈ ಬಗೆಯ ಅನೇಕ ಸಂಪ್ರದಾಯಗಳನ್ನು ನಾವು ನೋಡಬಹುದು.

ಅವುಗಳಲ್ಲಿ 'ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಸಂಪ್ರದಾಯ', 'ಕೊಳಹಾಳು ಕೆಂಚಾವಧೂತರ ಸಂಪ್ರದಾಯ', 'ಕಳವೀಬಾಗಿ ರಂಗಾವಧೂತರ ಸಂಪ್ರದಾಯ', 'ಕಂದಿಕೆರೆ ಶಾಂತಾವಧೂತರ ಸಂಪ್ರದಾಯ', 'ವದ್ದೀಕೆರೆ ಸಿದ್ಧಪ್ಪನ ಸಂಪ್ರದಾಯ' ಮತ್ತು 'ಗುಡಿಕಲ್ಲು ಸಂಪ್ರದಾಯ'. ಈ ಎಲ್ಲ ಸಂಪ್ರದಾಯಗಳು ಗುರು ಪರಂಪರೆಯನ್ನು ಹುಟ್ಟುಹಾಕುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿವೆ. ಇಲ್ಲಿನ ಪ್ರಮುಖ ಮಠಗಳಾದ ಶ್ರೀ ಮುರುಘರಾಜೇಂದ್ರ ಮಠ, ತರಳಬಾಳು ಮಠ, ಸಾಣೇಹಳ್ಳಿ ಮಠ ಮತ್ತು

ಇತರೆ ಮತಗಳು ಸಹ ಇಲ್ಲಿನ ಜನರ ಜೀವನವನ್ನು ಸಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲರನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ಈ ಭಾಗದಲ್ಲಿ ಪ್ರಮುಖವಾಗಿ ಕಾಣುವಂತಹ ತತ್ವಪದಕಾರರೆಂದರೆ ತುರುವನೂರು ಲಿಂಗಾರ್ಯ, ಹೊನ್ನೇನಹಳ್ಳಿ ದಾಸಗಿರಿಯಪ್ಪ, ಸಕ್ರಪ್ಪತಾತ, ಅನುಭಾವಿಗಳಾದ ತುರುವನೂರು ಶಿವಲಿಂಗಪ್ಪ, ಖಂಡೇನಹಳ್ಳಿ ಜಿ. ಪರಂಧಾಮಯ್ಯ, ಅವಧೂತರಾದ ಕೊಳಹಾಳ ಕೆಂಚವಧೂತರು, ರಂಗವಧೂತರು, ಶಾಂತವಧೂತರು, ವೀರಪ್ಪತಾತ, ಪಾರಪ್ಪಜ್ಜ, ನರಹರಿಗಳು ಮೊದಲಾದ ಅವಧೂತರನ್ನು ಕಾಣಬಹುದು. ಇವರ ತತ್ವಪದಗಳಲ್ಲಿ ಲೋಕದ ವಿವೇಚನೆಯ ಜೊತೆಗೆ, ಸಾಮಾಜಿಕ ಚಿಂತನೆ, ಸಾಮಾಜಿಕ ವಿಡಂಬನೆ, ವೈಚಾರಿಕತೆಯ ಅಂಶಗಳು ಮಾನವೀಯ ಮೌಲ್ಯಗಳು, ಹುಟ್ಟು–ಸಾವಿನ ಬಗ್ಗೆ, ಬದುಕು–ಬವಣೆಗಳ ಬಗ್ಗೆ, ಸಂಸಾರದ ಜಂಜಾಟವನ್ನು, ಕಾಯಕದ ಮಹತ್ವವನ್ನು, ಕಾಯದ ಪ್ರಾಮುಖ್ಯತೆಯನ್ನು ಹೇಳಲು, ಪ್ರಾಣಿ ಪಕ್ಷಿಗಳ ರೂಪಕಗಳನ್ನು ಬಳಸಿಕೊಂಡು ಪದಗಳನ್ನು ಕಟ್ಟಿ ಹಾಡುವ ಮೂಲಕ ಅವುಗಳನ್ನು ಸಾಮಾಜಿಕ ಚಿಂತನೆಗೆ ಒಳಪಡಿಸಿರುವುದನ್ನು ಇವರ ತತ್ವಪದಗಳು ಸಾರಿ ಹೇಳುತ್ತಿವೆ. ಸಂತರು, ಅವಧೂತರು ತತ್ವಪದಕಾರರೂ ಈ ಭಾಗವನ್ನ ಸಾಂಸ್ಕೃತಿಕವಾಗಿ ಒಂದು ಆಧ್ಯಾತ್ಮ ಕೇಂದ್ರವನ್ನಾಗಿ ಮಾಡಿಕೊಂಡು ಸಮಾಜದ ಅಂಕು ಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರೆಂಬುದು ವಿಶೇಷವಾಗಿದೆ.

ಸಮಾಜದ ಜ್ವಲಂತ ಸಮಸ್ಯೆಗಳಾದ ಮೌಢ್ಯಾಚರಣೆ, ಗೊಡ್ಡು ಸಂಪ್ರದಾಯಗಳನ್ನು ಜಾತೀಯತೆಯನ್ನು ತಮ್ಮ ತತ್ವಪದಗಳ ಮೂಲಕ ಜ್ಞಾನದ ಓರೆಗಲ್ಲಿಗೆ ಹಚ್ಚಿ ಸಮಾಜವನ್ನು ತಿದ್ದುವ ಕೆಲಸವನ್ನು ಈ ಭಾಗದ ತತ್ವಪದಕಾರರು ಮಾಡಿದ್ದಾರೆ. ಸಮಾಜದಲ್ಲಿನ ಪ್ರತಿಯೊಬ್ಬರಿಗೂ ಬದುಕಿನ ನಶ್ವರತೆಯನ್ನು ತಿಳಿಸಿಕೊಡುವುದರ ಜೊತೆಗೆ ಮೇಲು ಕೀಳಿನ ಮನೋಭಾವವನ್ನು, ಒಳಿತು ಕೆಡುಕುಗಳ ಸಾರವನ್ನು, ಜಾತಿಯತೆಯನ್ನು ವಿಡಂಬಿಸಿ, ಸಮ ಸಮಾಜವನ್ನು ಕಾಣಲು ಶರಣರಂತೆ ಶ್ರಮಿಸಿದವರು ತತ್ವಪದಕಾರರು. ಆಡಂಬರದ ಬದುಕನ್ನು, ಢಾಂಬಿಕ ಭಕ್ತಿಯನ್ನು, ಇಹದೊಳಗಿನ ಸುಖವನ್ನು, ವಿಡಂಬಿಸುವುದರ ಜೊತೆಗೆ ವಿವೇಚಿಸಿ, ವೈಚಾರಿಕತೆಯ ಹಿನ್ನೆಲೆಯಲ್ಲಿ ಸಮಾಜಕ್ಕೆ ಅರ್ಥೈಸುವಂತಹ ಕೆಲಸವನ್ನ ತತ್ವಪದಕಾರರು ಮಾಡಿರುವುದನ್ನು ಕಾಣಬಹುದು. ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ತತ್ವಪದಕಾರರ ತತ್ವಪದಗಳಲ್ಲಿನ ಸಾಮಾಜಿಕ ಮೌಲ್ಯಗಳನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ಗುರುತಿಸುವಂತಹ ಪ್ರಯತ್ನನ್ನು ಈ ಲೇಖನದಲ್ಲಿ ಮಾಡಲಾಗಿದೆ.

'ಶಿಶುವಿದ್ದ ಕಾಲಕ್ಕೆ ತಲೆ ನಿಲ್ಲದೆಂಬಂತೆ, ಬೆಳೆದುದ್ದ ಕಾಲಕ್ಕೆ ತಲೆ ಬಾಗದೆಂಬಂತೆ' ತಾನು ತನ್ನದೆಂಬ ಭ್ರಮೆಯಲ್ಲಿ ಮಾನವನು ಜೀವಿಸುತ್ತಿರುತ್ತಾನೆ. ಏನ್ನನ್ನಾದರು ಪಡೆಯಬಲ್ಲೆನೆಂಬ ಹಮ್ಮಿನಲ್ಲಿರುತ್ತಾನೆ, ಸ್ಥಿರವಲ್ಲದ ಕಾಯವನ್ನು ನಂಬಿ ನೆಚ್ಚಿ, ಸದ್ಗುಣಗಳನ್ನು ಕೊಚ್ಚಿ ಬೀಸಾಡುತ್ತಾನೆ. ಮಣ್ಣಲ್ಲಿ ಬೆಳೆದ ಆಹಾರವುನ್ನುಂಡು ಬೆಳೆದು, ಮಣ್ಣೆ ನನ್ನದೆಂದು ಹಾರಾಡುತ್ತಾನೆ. ಕೊನೆಗೆ ಮಣ್ಣಿಗೆ ಆಹಾರವಾಗಿ ಬಿಡುತ್ತಾನೆ. 'ನರನ ಜನ್ಮವು ಪುಣ್ಯದ ಫಲವೆ ಹೊರೆತು ಪಾಪದ ಕೂಸಲ್ಲ.' ಮಾನವ ಜನ್ಮ ಅಪರೂಪದ್ದಾಗಿದ್ದು ಅದರ ಸಾರ್ಥಕತೆಯನ್ನು ಮಾಡಿಕೊಳ್ಳಲು ಧ್ಯಾನ, ಭಕ್ತಿ, ಪರೋಪಕಾರ, ದಯೆ, ಕರುಣೆ, ಪ್ರೀತಿ ಎಂಬ ಮೌಲ್ಯಗಳನ್ನು ಬೆಳಸಿಕೊಂಡು ಜ್ಞಾನವನ್ನು ಪಡೆದುಕೊಂಡಾಗಲೇ ಮಾನವ ಜನ್ಮ ಪಾವನವಾಗುವುದು. ಎಂಬಂತ ಅರ್ಥವಿರುವ ಮಾನವ ಜನ್ಮದ ಮಹತ್ವವನ್ನು ಕುರಿತ "ಹೊನ್ನೇನಹಳ್ಳಿ ದಾಸಗಿರಿಯಪ್ಪನವರ" ತತ್ವಪದವೊಂದು ಹೀಗಿದೆ;

ಬರಿಯ ಭ್ರಮೆ ಬರಿಯಭ್ರಮೆ। ಮಾಯಜಾಲದ
ಬರಿಯ ಭ್ರಮೆ ॥ಪ॥

ಸುರಮುನಿಗಳು ಸಹ ಗಳಿಸುವ।
ವ್ರತಗಳನಳಿಸುವ ಮಾಯದ ಮೂಲಭ್ರಮೆ
ಅಲ್ಲಿರುವಾ ಇಲ್ಲಿರುವಾ ದೇವರು ಎನ್ನುತಲಿ।
ತನ್ನೊಳು ತಿಲಿಯದೆ ಸನ್ನಿ ಭ್ರಮೆ ॥ಬರಿಯಭ್ರಮೆ ॥೧॥

ಸ್ಥಿರವಲ್ಲವೋ ಸ್ಥಿರವಲ್ಲವೋ । ಮಾನುಷ ಜನ್ಮವು
ಸ್ಥಿರವಲ್ಲವೋ ಮಣ್ಣಿನೊಳಗೆ ಪುಟ್ಟಿ ಮಣ್ಣಿನೊಳಗೆ ।
ಸೇರುವುದೆಂಬುದರಿಯದ ಮರುಳಭ್ರಮೆ ॥ಬರಿಯಭ್ರಮೆ ॥೨॥

ಅಪರೂಪವೋ ಅಪರೂಪವೋ ಮಾನಿಷ ಜನ್ಮವು
ಅಪರೂಪವೋ ಅಪರೋಕ್ಷ ಜ್ಞಾನವ ತನ್ನೊಳು ।
ತಿಳಿಯದ ಬರಿಯ ಭ್ರಮೆ ॥ ಬರಿಯ ಭ್ರಮೆ ॥೩॥

ಪುಸಿಯಲ್ಲವೊ ಪುಸಿಯಲ್ಲವೊ ।
ವಸುಧೆಯೊಳಗೆ ಕೊಳಹಾಳ
ಈಶ ಕೆಂಚೇಶನ ದಾಸನೊಳು ।
ಬೆರೆಯದ ಬರಿಯ ಭ್ರಮೆ ॥ಬರಿಯ ಭ್ರಮೆ ॥೪॥[೧]

ದಾಸಗಿರಿಯಪ್ಪನವರ ಈ ತತ್ವಪದದಲ್ಲಿನ 'ಅಪರೂಪವೋ ಅಪರೂಪವೋ ಮಾನಿಷ ಜನ್ಮವು' ಎಂಬ ಸಾಲುಗಳನ್ನು ನೋಡಿದಾಗ ಇದು ಮಾನವನ ಮಹತ್ವವನ್ನು ಸಾರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಈ ಸಾಲುಗಳಿಗೆ ಪುರಂದರ ದಾಸರ 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ' ಎಂಬ ಕೀರ್ತನೆಯು ಪ್ರೇರಣೆಯಾಗಿರಬಹುದು. ಅಲ್ಲದೇ ಈ ತತ್ವಪದವು ಮನುಜನ ಬದುಕಿನ ಸಾರ್ಥಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಇಂಥಹ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಲು ಗುರುವೆಂಬ ಕೊಳಹಾಳಿನ ಕೆಂಚೇಶನ ಪಾದವನಿಡಿದು ಪಾವನವಾಗೂ ಎಂಬುದನ್ನು ಸಾರಿ ಹೇಳುತ್ತಿದೆ. ಈ ಪದದಲ್ಲಿ ಬಂದಿರುವ 'ಭ್ರಮೆ' ಎಂಬ ಪದವು ಭ್ರಾಂತಿಯನ್ನು ಸಂಕೇತಿಸುತ್ತದೆ. ದೇಹವು ಗೋಚರಿಸುತ್ತದೆ

DOI: 10.59176

ಆದರೆ ದೇಹದೊಳಗಿರುವ ಉಸಿರಾಗಲಿ, ಆತ್ಮವಾಗಲಿ, ಆಲೋಚನೆಗಳಾಗಲಿ ಅಗೋಚರವಾಗಿಯೇ ಇರುತ್ತವೆ. ಅಲ್ಲದೆ ದೇಹವು ಸ್ಥಿರವೆಂದು ನಂಬುವ ನಮಗೆ ಅದೇ ರೋಗಗಳ ಗೂಡಾಗಿ ಬಾದಿಸುತ್ತದೆ. ಕಾಯ ಕಳೆಯುವ ಮುನ್ನವೇ ಗುರುವಿನ ಕರವಿಡಿ ಎನ್ನುವಂತಹ ಮಾರ್ಮಿಕ ಅರ್ಥವನ್ನು ಈ ತತ್ವಪದವು ನೀಡುತ್ತದೆ.

ಜಗವೊಂದು ಬಾಡಿಗೆ ಮನೆಯಣ್ಣ । ಅಣ್ಣಾ
ಬಾಡಿಗೆದಾರರು ಜೀವಿಗಳಣ್ಣ ॥ಪ॥
ಬಾಡಿಗೆ ಋಣವು ತೀರಿದ ಮೇಲೆ ।
ಇಲ್ಲಿನ ಆಟವು ಮುಗಿಯಿತು ಅಣ್ಣಾ ।
ಕಳಸ ಕನ್ನಡಿಯ ಸುಂದರ ಮನೆಯಿದು ।
ಮಣ್ಣಲಿ ಸೇರಿ ಮಣ್ಣಯ್ತೆ ಅಣ್ಣ ॥೧॥

ಉಸಿರು ಇರುವಾಗ ನಾನೇನನಣ್ಣ ।
ನಿಂತ ಅರಗಳಿಗೆ ನೀ ಶವವಣ್ಣ ।
ಅರಿಯದೆ ಸುಮ್ಮನೆ ನೀ ಕುಣಿದಣ್ಣ ।
ಪಾಪ ಕರ್ಮದ ಗಂಟು ಹೊರಬೇಕಣ ॥೨॥೨

ಭಗವಂತನ ಈ ಅನಂತ ಸೃಷ್ಟಿಯಲ್ಲಿ ಯಾವುದು ಶಾಶ್ವತ? ಎಂದರೆ ಉತ್ತರವಿಲ್ಲ. ಭಗವಂತನ ಸೃಷ್ಟಿಯಲ್ಲಿ ಅರಳಿದ ಈ ಭೂಮಂಡಲವು ಸುಂದರವಿದ್ದರು ಶಾಶ್ವತವಲ್ಲ. ಎಂದ ಮೇಲೆ ಇಲ್ಲಿ ವಾಸಿಸುವ ನಾವುಗಳು ಹೇಗೆ ಈ ಭೂಮಿಗೆ ಒಡೆಯರಾಗುತ್ತೇವೆ. ಈ ಭೂಮಿಯ ಮೇಲೆ ನಮ್ಮ ಪೂರ್ವಿಕರು ಇದ್ದರು, ಅವರ ಪೂರ್ವಿಕರು ಇದ್ದು ಅಳಿದರು; ಈಗ ನಾವು ಇದ್ದೇವೆ ಮುಂದೆ ನಮ್ಮ ಸಂತತಿಯವರು ಅವರ ಸಂತತಿಯವರೂ ಇರುತ್ತಾರೆ. ಈ ಭೂಮಿಗೆ ಬಂದು ಋಣ ಇದ್ದಷ್ಟು ಕಾಲ ಇದ್ದು ಹೋಗುವ ಬಾಡಿಗೆ ದಾರರು ನಾವು ಎಂಬ ತತ್ವವನ್ನು ಈ ತತ್ವಪದವು ಪ್ರತಿನಿಧಿಸುತ್ತದೆ. ದೇಹದಲ್ಲಿ ಪ್ರಾಣ ಇರುವವರೆಗು ನಾನು ನನ್ನದು ಎಂಬ ಅಹಂಮಿನಲ್ಲಿ ಬದುಕುತ್ತೇವೆ ಆದರೆ ಪ್ರಾಣ ಪಕ್ಷಿ ಹಾರಿ ಹೊದಮೇಲೆ ನಾಮಾಂಕಿತಗಳೆಲ್ಲ ಸರಿದು 'ಶವ' ಎಂಬ ಅಂಕಿತದಲ್ಲೇ ಅಗ್ನಿಗೆ ಆಹುತಿಯಾಗುತ್ತೇವೆ. ಎಂಬ ವಿಷಯವನ್ನು ಅನುಭವಿಗಳಾದ ಪರಂಧಾಮ ಜಿ ಅವರು ಸಮಾಜಕ್ಕೆ ಬದುಕಿನ ನಶ್ವರತೆಯನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ತಿಳಿಸಿದ್ದಾರೆ.

ಮನುಷ್ಯನಲ್ಲಿ ಸಕರಾತ್ಮಕ ಗುಣಗಳನ್ನು, ಒಳ್ಳೆಯ ಕಾರ್ಯಗಳನ್ನು ಮಾಡುವಂತೆ, ವೃದ್ಧಿಸುವಂತೆ ಮಾಡುವ ಪ್ರಕ್ರಿಯೆಯನ್ನು ಸಂಸ್ಕಾರವೆಂದು ಗುರುತಿಸಬಹುದು. ಇತರರಿಗೆ ನೋವುಂಟು ಮಾಡದೆ ಒಳ್ಳೆಯ ಕೆಲಸಗಳನ್ನು ಮಾಡುವುದೆ ಸಂಸ್ಕಾರವೆಂದು ಕರೆಯಬಹುದು. ಉದಾಹರಣೆಗೆ 'ನಮಗೆ ಹಸಿವಾದಗ ಅನ್ನ ತಿನ್ನುವುದು ಪ್ರಕೃತಿ, ಇನ್ನೊಬ್ಬರ ಅನ್ನದ ಪಾಲನ್ನು ಕಸಿದು ತಿನ್ನುವುದು ವಿಕೃತಿ, ಹಂಚಿ ತಿನ್ನುವುದು ಸಂಸ್ಕೃತಿ'. ಸಂಸ್ಕಾರವು ನೋಡುವುದರಿಂದ ಆಚರಿಸುವುದರಿಂದ ಬರುತ್ತದೆ. 'ಸಂಸ್ಕಾರದಿಂದ ಕಲ್ಲು ಶಿಲೆಯಾಗುತ್ತದೆ, ನೀರು ತೀರ್ಥವಗುತ್ತದೆ, ಅನ್ನ ಪ್ರಸಾದವಾಗುತ್ತದೆ, ದಾನವ

ಮಾನವನಾಗುತ್ತನೆ, ಕೆಟ್ಟವನು ಒಳ್ಳೆಯವನಾಗುತ್ತನೆ, ದಡ್ಡ ಜಾಣನಾಗುತ್ತನೆ, ವಿಷವು ಅಮೃತವಾಗುತ್ತದೆ, ಕಸವು ರಸವಾಗುತ್ತದೆ, ಮಸಿಯಲ್ಲಿಯೂ ಚಿತ್ರ ಮೂಡುತ್ತದೆ, ನರನು ನಾರಾಯಣನಾಗಬಲ್ಲನು, ಸಂಸ್ಕಾರದಿಂದ ಶಿಷ್ಯನ ಗುರುವಾಗಬಲ್ಲ ಎಂಬುದಕ್ಕೆ ತುರುವನೂರು ಲಿಂಗಾರ್ಯರ ತತ್ವಪದವೊಂದು ಹೀಗಿದೆ.'

ಸಂಸ್ಕಾರದಿಂದಲೆ ಶಿಲೆ ಲಿಂಗವಹುದು ।
ಸಂಸ್ಕಾರದೊಳು ನುಡಿ ಮಂತ್ರವಾಗುವುದು ॥ಪ॥

ಸಂಸ್ಕಾರದಿಂದಲೆ ಜಲ ತೀರ್ಥವಾಗುವುದು ।
ಸಂಸ್ಕಾರದಿಂದನ್ನ ಸುಪ್ರಸಾದವಾಗುವುದು ॥ಅ.ಪ॥

ನರನು ಸಂಸ್ಕಾರದಿ ಶರಣನಾಗುವನು ।
ದುರುಳ ಸಂಸ್ಕಾರದೊಳು ಸಜ್ಜನನಾಹನು ॥
ಮರುಳ ಸಂಸ್ಕಾರದಿ ಜಾಣನಾಗುವನು ।
ನರಕಿ ಸಂಸ್ಕಾರದಿಂ ಮುಕ್ತನಾಗುವನು ॥೧॥

ವಿಷವುಮೃತವಪ್ಪುದು ಸಂಸ್ಕಾರದಿಂದ ।
ಕಸವು ರಸವಪ್ಪುದು ಸಂಸ್ಕಾರದಿಂದ ॥
ಮಸಿ ಚಿತ್ರವಪ್ಪುದು ಸಂಸ್ಕಾರದಿಂದ
ಪಶು ಪೂಜ್ಯವಪ್ಪುದು ಸಂಸ್ಕಾರದಿಂದ ॥೨॥

ಸಂಸ್ಕಾರದಿಂದ ಜೀವನು ಶಿವನಹನು ।
ಸಂಸ್ಕಾರದಿಂದ ಶಿಷ್ಯನು ಗುರುವಹನು ॥
ಸಂಸ್ಕಾರದಿಂದ ಬದ್ಧನು ಮುಕ್ತನಹನು ।
ಸಂಸ್ಕಾರದೊಳು ನರಹರಿಯೊಲಿಯುವನು ॥೩॥[೩]

ಕಲ್ಲು ಶಿಲ್ಪಿಯಿಂದ ಶಿಲೆಯಾಗುತ್ತದೆ. ಶಿಲೆಯು ಗರ್ಭಗುಡಿಯ ಸೇರಿ ಪೂಜೆಗೆ ಲಿಂಗವಾಗುತ್ತದೆ. ಕಲ್ಲೊಂದೆ ಅದರೆ ಅದು ಪಡೆದುಕೊಂಡ ಸಂಸ್ಕಾರದಿಂದಲೆ ಪೂಜೆಗೆ ಯೋಗ್ಯವಾಯಿತು. ಹಾಡುವ ಮಾತುಗಳು ನೂರಿದ್ದರು ಮಂತ್ರವಾಗಲಾರದು ಸಂಸ್ಕಾರದಿಂದ ಬರುವ ಮಾತು ಮಂತ್ರವಾಗಬಲ್ಲದು. ಒರ್ವ ಹೆಡ್ಡನಾಡುವ ಮಾತಿಗೂ,

ಅನುಭವಿಯಾಡುವ ಮಾತಿಗೂ ಇರುವ ವ್ಯತ್ಯಾಸದಂತೆ, ದೇವಾಸ್ಥಾನದ ಮುಂದೆ ಹಾಡುವ ಮಾತು ಮಂತ್ರವಾಗಲಾರದು ಆದರೆ ಗರ್ಭಗುಡಿಯಲ್ಲಿ ಹೇಳು ನುಡಿಗಳು ಮಂತ್ರವಾಗುಂತೆ. ಹಾಗೆಯೇ ದೇವಸ್ಥಾನದಲ್ಲಿ ಕಾಲು ತೊಳೆಯಲು ಇರುವ ನೀರು ತೀರ್ಥವಾಗಲಾರದು ಅದೇ ನೀರು ಗರ್ಭಗುಡಿಯ ಸೇರಿದೊಡನೆ ತೀರ್ಥವಗುವುದು ಸಂಸ್ಕಾರದಿಂದಲೆ. ಲಿಂಗಾರ್ಯರ ಈ ತತ್ವಪದವು ಸಮಾಜದಲ್ಲಿನ ರಿತಿ–ನೀತಿಗಳನ್ನು, ಆಚರ–ವಿಚಾರಗಳನ್ನು, ನಡೆ–ನುಡಿಗಳನ್ನು, ಸಂಸ್ಕಾರ–ಸಂಪ್ರದಾಯಗಳನ್ನು ಅರಿತು ಆಚಾರಿಸುವಂತೆ ಹೇಳುವ ನುಡಿಗಳಾಗಿವೆ.

ಇವರ 'ಸ್ವಾರ್ಥವಳಿದರೇ ಪರಮಾರ್ಥವಾಗುವುದೆಂದು ತಿಳಿಯೋ ಜೀವಾತ್ಮ ತತ್ವಪದವು', 'ಬಡವನೆ ಲೋಕಕೆ ಉಪಕಾರಿ' ಎಂಬ ಪದವು, 'ಬೈದವರೆನ್ನಯ ಬಂದುಗಳು' ಎಂಬ ಪದವು, 'ದಾಸೋಹಂ ಭಾವ ಪಡೆಯೋ । ಶಿವನ' ಎಂಬ ಪದವು, ಮುಂದೇನು ಗತಿಯೆನ್ನಬೇಡಾ" ಇನ್ನು ಮುಂತಾದ ಇವರ ಪದಗಳು ಹಾಗೂ ಹೊನ್ನೇನಹಳ್ಳಿ ದಾಸಗಿರಿಯಪ್ಪನವರ 'ಆಸೆಯ ಮಿತಿಯಿರಲಿ' ಎಂಬ ತತ್ವಪದವು, 'ಹದ್ದು ಮೀರಿ ನಡೆಯಲಿ ಬೇಡ । ಎಲೆ ಜೀವ ನಿನ್ನ' ಎಂಬ ಪದವು, 'ಸಂಶಯ ಬೀಡಬೇಕು', 'ಉತ್ತಮನಗಿ ನೀ ಮಿತ್ಯ ದೇಹವ ಹೊತ್ತು' ಎಂಬ ತತ್ವಪದಗಳು ಹಾಗೂ ಸಕ್ರಪ್ಪತಾತನವರ 'ದಾನಗುಣವನ್ನು ದಹನ ಮಾಡುವರೆ' ಎಂಬ ತತ್ವಪದವು, 'ಇಂದು ಸತ್ತವರೆಲ್ಲ ಮುಂದೆ' 'ನಿನ್ನವರು ನಿನಗಿಲ್ಲೆಲೋ', 'ಮಣ್ಣು ಕಂಡು ಮಡಕೆಯೆನ್ನುವರೇ', 'ನಿತಿಯಿಂದಲಿ ನಡೆಯಬೇಕಣ್ಣಾ' ಮತ್ತು ತುರುವನೂರಿನ ಶಿವಲಿಂಗಪ್ಪನವರ 'ಬಾಳುವೆಗಾಗಿ ಬಡಿದಾಡಿ' ಎಂಬ ತತ್ವಪದವು, 'ತನುವು ತೊಳೆದೆಯಲ್ಲ । ಮನಸಿನ । ದಿನಸು ತೊಳೆಯಲಿಲ್ಲ', ದಾನ ಮಾಡಿರಯ್ಯ ನೀವು ದನ ಮಾಡಿರೊ' ಎಂಬಂತಹ ಮುಂತದ ತತ್ವಪದಗಳು, ಸಾಮಾಜಿಕ ಮೌಲ್ಯಗಳನ್ನು ಸಾರುವಂತಹ ಹಾಗೂ ಸಮಾಜವನ್ನು ತಿದ್ದುವಂತಹ, ಸಾಮಾಜಿಕ ಮೌಲ್ಯಗಳನ್ನು ಪಸರಿಸುವಂತಹ, ಸಾಮಾಜಿಕ ಬದಲಾವಣೆಯನ್ನು ತರುವಂತಹ ತತ್ವಪದಗಳಾಗಿವೆ.

ಹೀಗೆ ಚಿತ್ರದುರ್ಗ ಜಿಲ್ಲೆಯ ತತ್ವಪದಕಾರರ ತತ್ವಪದಗಳು ಸಮಾಜದಲ್ಲಿನ ಜನರ ಜೀವನ್ನು ಹಾಗೂ ಬದುಕುವ ರೀತಿಯನ್ನು ಬದಲಾಯಿಸುವಂತಹ ಸತ್ವವುಳ್ಳ ಪದಗಳಾಗಿವೆ. ತತ್ವಪದಗಳ ಮುಖ್ಯ ಉದ್ದೇಶ ಸಮಾಜದಲ್ಲಿ ಬದಲಾವಣೆಯನ್ನು ತರುವುದಾಗಿದೆ. ಸಮಾಜದಲ್ಲಿ ಸಮಾನತೆ, ಸಹಕಾರ, ಸಹಬಾಳ್ವೆಯ ಜೊತೆಗೆ ಸಮಾಜದ ಮನುಜರು ಅರಿವಿನ ಹಾದಿ ಹಿಡಿದು ಬದುಕುವುದರಿಂದ ಸಮಾಜಕ್ಕು ಕ್ಷೇಮ ಎಂಬುದನ್ನು ಅರಿತಿದ್ದರಿಂದಲೆ ಶರಣರು, ಹರಿದಾಸರು, ತತ್ವಪದಕಾರರೆಲ್ಲರೂ ತಮ್ಮ ವಚನಗಳ ಮೂಲಕ, ಕೀರ್ತನೆಗಳ ಮೂಲಕ, ತತ್ವಪದಗಳ ಮೂಲಕ ಸಮಾಜಕ್ಕೆ ತಿಳಿಸುವಂತಹ ಪ್ರಯತ್ನ ಪಟ್ಟರು. ಆಧ್ಯಾತ್ಮಿಕ ಅನುಸಂಧಾನದ ಜೊತೆಜೊತೆಗೆ ಸಮಾಜವನ್ನು ಎಚ್ಚರಿಸುವುದರೊಂದಿಗೆ ಶುದ್ಧೀಕರಿಸುವ ಕಾರ್ಯವನ್ನು ತತ್ವಪದಕಾರರು ನಿರಂತರವಾಗಿ ಮಾಡಿಕೊಂಡು ಬಂದಿರುವುದನ್ನು ಗಮನಿಸಬಹುದು. ಈ ಭಾಗದ ತತ್ವಪದಕಾರರು ಬಯಲು ಸೀಮೆಯ, ಬರದ ನಾಡಿನ ಜನರ ಕಷ್ಟದ ಬದುಕನ್ನು ಕಂಡಿದ್ದರಿಂದ ತಮ್ಮ ತತ್ವಪದಗಳಲ್ಲಿ ಸಮಾಜವನ್ನು ತಿದ್ಧುವಂತಹ, ಬದಲಾವಣೆಯನ್ನು ತರುವಂತಹ, ಹಣತೆಯನ್ನು ಹಚ್ಚಿದ್ದಾರೆ.

DOI: 10.59176
http://www.kristujayantijournal.com/index.php/KJKSP

**ಕೊನೆ ಟಿಪ್ಪಣಿ :**

೧. ಜೆ. ಕರಿಯಪ್ಪ ಮಾಳಿಗಿ (ಸಂ.) – ಹೋನ್ನೆನಹಳ್ಳಿ ದಾಸಗಿರಿಯಪ್ಪ ಸಕ್ರಪ್ಪತಾತ ಮತ್ತು ಇತರರ ತತ್ವಪದಗಳು, ಕನ್ನಡ ಮುಸ್ತಕ. ಪ್ರಾಧಿಕಾರ. ಬೆಂಗಳೂರು. ೨೦೧೭, ಮು.ಸಂ–೧೪.

೨. ಪರಂಧಾಮ ಜಿ. – ಶಾಂತಾತ್ಮ ಬೋಧೆ, ಸದ್ಗುರು ಪ್ರಕಾಶನ್ ಖಂಡೇನಹಳ್ಳಿ, ೨೦೨೦. ಮು.ಸಂ–೮೯.

೩. ನಟರಾಜ ಬುದಾಳು. (ಸಂ) – ತುರುವನೂರು ಲಿಂಗಾರ್ಯರ ತತ್ವಪದಗಳ, ಭಾಗ–೧ ಕನ್ನಡ ಮುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೭ ಮು.ಸಂ–೨೭.

**ಆಕರ ಗ್ರಂಥಗಳು :**

೧. ಹೋನ್ನೆನಹಳ್ಳಿ ದಾಸಗಿರಿಯಪ್ಪ ಸಕ್ರಪ್ಪತಾತ ಮತ್ತು ಇತರರ ತತ್ವಪದಗಳು., (ಸಂ) – ಜೆ. ಕರಿಯಪ್ಪ ಮಾಳಿಗಿ, ಕನ್ನಡ ಮುಸ್ತಕ. ಪ್ರಾಧಿಕಾರ. ಬೆಂಗಳೂರು. ೨೦೧೭.

೨. ಶಾಂತಾತ್ಮ ಬೋಧೆ – ಪರಂಧಾಮ ಜಿ., ಸದ್ಗುರು ಪ್ರಕಾಶನ್ ಖಂಡೇನಹಳ್ಳಿ, ೨೦೨೦.

೩. ತುರುವನೂರು ಲಿಂಗಾರ್ಯರ ತತ್ವಪದಗಳು ಭಾಗ–೧ (ಸಂ)., – ನಟರಾಜ ಬುದಾಳು, ಕನ್ನಡ ಮುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೭

೪. ತತ್ವಪದ ಸಹಿತ್ಯ – ಡಾ. ಸುರೇಶ ಹನಗಂಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೨೨.

೫. ಕನ್ನಡ ಸಂತರ ಪರಮಾರ್ಥ ಪಥ – ರಾನಡೆ ಗುರುದೇವ, ಗುರುದೇವ ರಾನಡೆ ಮಂದಿರ, ಬೆಳಗಾವಿ, ೨೦೧೦.